ಕರ್ನಾಟಕ ಸರ್ಕಾರದ ನಡವಳಿ

ವಿಷಯ: 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ (General Basic Grant) ಹಂಚಿಕೆ ಮತ್ತು ಬಳಕೆ ಕುರಿತು ಅನುಮೋದನೆಯಾಗಿರುವ ಎಲ್ಲಾ ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆಯ ಕಲಂ 4(ಜಿ) ರಡಿ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಪತ್ರ ಸಂಖ್ಯೆ: ನಅಇ 294 ಎಂಎನ್‌ಯು 2017, ದಿನಾಂಕ: 24-05-2017.

2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆ/ಪಿಆರ್/6646/2017-18, ದಿನಾಂಕ: 05-01-2018.

3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆ/ಪಿಆರ್/7682/2017-18, ದಿನಾಂಕ: 08-02-2018.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 24-05-2017ರ ಸರ್ಕಾರದ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2017-18ನೇ ಸಾಲಿನ ಆಯವ್ಯಯವನ್ನು ಈ ಕೆಳಕಂಡ ಷರತ್ತುಗಳಿಗೆ ಹೊಂದಾಣಿಕೆ ಮಾಡಿಕೊಂಡು ವ್ಯವಹರಿಸುವಂತೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 170(1)(2) ರನ್ವಯ ಅನುಮೋದನೆಯನ್ನು ನೀಡಲಾಗಿರುತ್ತದೆ.

(1) ಬಿ.ಬಿ.ಎಂ.ಪಿ.ಯ ಆಯವ್ಯಯದಲ್ಲಿನ ಸರ್ಕಾರದ ಅನುದಾನವು, ರಾಜ್ಯದ ಆಯವ್ಯಯದಲ್ಲಿ ಬಿ.ಬಿ.ಎಂ.ಪಿ.ಗೆ ಒದಗಿಸಿರುವ ಅನುದಾನಕ್ಕನುಗುಣವಾಗಿರತಕ್ಕದ್ದು.

(2) ರಾಜ್ಯ ಸರ್ಕಾರದಿಂದ ಒದಗಿಸಲಾದ ಅನುದಾನದಿಂದ ಅನುಮೋದನೆಗೊಂಡ ಕ್ರಿಯಾಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(3) ಆಯವ್ಯಯದಲ್ಲಿ ಜಮೆ ಮತ್ತು ಖರ್ಚುಗಳನ್ನು ಸಮತೋಲನವನ್ನು ಕಾಪಾಡಿಕೊಳ್ಳತಕ್ಕದ್ದು.

2. ಮೇಲೆ (2) ಮತ್ತು (3) ರಲ್ಲಿ ಓದಲಾದ ದಿನಾಂಕ: 05-01-2018 ಮತ್ತು 08-02-2018ರ ಪತ್ರಗಳಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, ಸರ್ಕಾರದ ಆದೇಶ ಸಂಖ್ಯೆ: ನಅಇ 294 ಎಂಎನ್‌ಯು 2017, ದಿನಾಂಕ: 24-05-2017 ರಲ್ಲಿ 2017-18ನೇ ಸಾಲಿನ ಪಾಲಿಕೆಯ ಆಯವ್ಯಯವನ್ನು ಅನುಮೋದಿಸಿದ್ದು, ಈ ಆದೇಶದಲ್ಲಿರುವ ಅನುಬಂಧ-02 ರಲ್ಲಿ 14ನೇ ಹಣಕಾಸು ಆಯೋಗದ ಅನುದಾನವು 09 ಉದ್ದೇಶಗಳಾದ (1) ಕುಡಿಯುವ ನೀರು ಕಾಮಗಾರಿಗಳು, (2) ಸಾಮೂಹಿಕ/ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ, (3) ಒಳಚರಂಡಿ ವ್ಯವಸ್ಥೆ ಕಾಮಗಾರಿಗಳು, (4) ಘನತ್ಯಾಜ್ಯ ವಸ್ತು ನಿರ್ವಹಣೆ, (5) ಮಳೆ ನೀರು ಚರಂಡಿ ಕಾಮಗಾರಿ, (6) ಸಮುದಾಯ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ), (7) ರಸ್ತೆ ಮತ್ತು

. . . 2 .

ಪಾದಚಾರಿ ಮಾರ್ಗಗಳ ನಿರ್ವಹಣೆ, (8) ವಿದ್ಯುತ್ ಬೀದಿ ದೀಪಗಳ ಅಳವಡಿಕೆ/ನಿರ್ವಹಣೆ/ವಿದ್ಯುತ್ [illegible] ಕ್ರಮಗಳು ಮತ್ತು (9) ಸ್ಮಶಾನ/ಚಿತಾಗಾರ/ಕಚೇರಿಗಳ ನಿರ್ವಹಣೆ ಕಾರ್ಯಗಳಿಗೆ ರೂ.265.30 ಕೋ[illegible] ಅನುಮೋದನೆ ನೀಡಲಾಗಿರುತ್ತದೆ.

3. ಅನುಮೋದನೆಯಾಗಿರುವ ಕಾಮಗಾರಿಗಳನ್ನು ತುರ್ತಾಗಿ ಕೈಗೊಂಡು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವಿಷಯದ ಸಂಖ್ಯೆ: 23(193), ದಿನಾಂಕ: 30-08-2017 ರಲ್ಲಿ ಚರ್ಚಿಸಲಾಗಿದ್ದು, ಈ ವಿಚಾರದಲ್ಲಿ ಸರ್ಕಾರಕ್ಕೆ 2017-18ನೇ ಸಾಲಿನ 14ನೇ ಹಣಕಾಸು ಆಯೋಗದಲ್ಲಿ ಅನುಮೋದನೆಯಾಗಿರುವ ಎಲ್ಲಾ ಉದ್ದೇಶಗಳ ಕಾಮಗಾರಿಗಳಿಗೆ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ಕೆ.ಟಿ.ಪಿ.ಪಿ. ಕಾಯ್ದೆ 4(ಜಿ) ವಿನಾಯಿತಿ ಅಡಿ ಕೈಗೊಳ್ಳಲು ಅಗತ್ಯ ಕ್ರಮವಹಿಸುವುದೆಂದು ತೀರ್ಮಾನಿಸಲಾಗಿರುತ್ತದೆ. 14ನೇ ಹಣಕಾಸು ಆಯೋಗದಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳು ಕೆ.ಟಿ.ಪಿ.ಪಿ. ಕಾಯ್ದೆಯಂತೆ ಟೆಂಡರ್ ಕರೆದು ಪ್ರಾರಂಭಿಸಲು ಹಾಗೂ ಅನುಷ್ಠಾನಗೊಳಿಸಲು ಹೆಚ್ಚಿನ ಕಾಲಾವಧಿ ಅಗತ್ಯವಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ: ನಅಇ 151 ಎಸ್ಎಫ್ಸಿ 2017, ದಿನಾಂಕ: 14-07-2017 ರಲ್ಲಿ, 2016-17ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಿಡುಗಡೆ ಮಾಡಿರುವ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ (General Basic Grant) ಮತ್ತು ಸಾಮಾನ್ಯ ಕಾರ್ಯನಿರ್ವಹಣಾ (General Performance Grants) ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಅತ್ಯಂತ ತುರ್ತು ಹಾಗೂ ಅತೀ ಅವಶ್ಯವೆಂದು ಪಾಲಿಕೆಯಲ್ಲಿ ನಿರ್ಧರಿಸಿ, ಕೆ.ಟಿ.ಪಿ.ಪಿ. ಕಾಯ್ದೆಯಿಂದ ವಿನಾಯಿತಿ ನೀಡಿರುವ ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಅನುಷ್ಠಾನಗೊಳಿಸಲು ಅಗತ್ಯ ಕ್ರಮಕೈಗೊಳ್ಳಲು ನಿರ್ದೇಶಿಸಲಾಗಿದೆ. 2017-18ನೇ ಸಾಲಿನ ವರ್ಷವು ಅಂತ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಫೆಬ್ರವರಿ 2018ರ ಮಾಹೆಯಲ್ಲಿ ಕಾಮಗಾರಿಗಳನ್ನು ಆರ್ಥಿಕ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉಳಿದಿರುವ ಕನಿಷ್ಠ ದಿನಗಳಾಗಿದ್ದು ಮತ್ತು ಶೀಘ್ರವಾಗಿ ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮತಿಯಿಂದ ಕೆ.ಟಿ.ಪಿ.ಪಿ. ಕಾಯ್ದೆ 4(ಜಿ) ವಿನಾಯಿತಿ ಅಡಿ ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ನಅಇ 23 ಎಂಎನ್ಪೈ 2018,</u>
<u>ಬೆಂಗಳೂರು, ದಿನಾಂಕ: 15-06-2018.</u>

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಪತ್ರ ಸಂಖ್ಯೆ: ನಅಇ 294 ಎಂಎನ್ಯು 2017, ದಿನಾಂಕ: 24-05-2017 ರಲ್ಲಿ 2017-18ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯಕ್ಕೆ ಅನುಮೋದನೆಯನ್ನು ನೀಡಿದ್ದು, ಆಯವ್ಯಯದಲ್ಲಿನ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ (General Basic Grant) ಅಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುದಾನದಲ್ಲಿ ರೂ.265.30 (ರೂ.ಇನ್ನೂರ ಅರವತ್ತೈದು ಕೋಟಿ ಮೂವತ್ತು ಲಕ್ಷಗಳು ಮಾತ್ರ) ಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ (ಅನುಬಂಧಲ್ಲಿರುವಂತೆ ಮಾತ್ರ) ಅನುಮೋದನೆಯನ್ನು ನೀಡಿದ್ದು, ಈ ಆದೇಶದೊಂದಿಗೆ ಲಗತ್ತಿಸಿರುವ ರೂ.2.00

. . . 3 .

ಕೋಟಿಗಳ ಮೊತ್ತದವರೆಗಿನ ಕಾಮಗಾರಿಗಳನ್ನು ನೇರವಾಗಿ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮೂಲಕ ಕೈಗೊಳ್ಳಲು ಸಾಮಾನ್ಯ ವಿನಾಯಿತಿಯನ್ನು ನೀಡಲಾಗಿರುತ್ತದೆ. ಹಾಗೂ ರೂ.2.00 ಕೋಟಿ ಮೀರಿದ ಕಾಮಗಾರಿಗಳನ್ನು ಟೆಂಡರ್ ಮೂಲಕ ಕೈಗೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

1. ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ತನ್ನದೇ ಆಂತರಿಕ ಸಂಪನ್ಮೂಲಗಳಿಂದ ಕಾರ್ಯಗೊಳಿಸತಕ್ಕದ್ದು. ಬೇರೆಯವರ ಮುಖಾಂತರ ಕೈಗೊಳ್ಳುವಂತಿಲ್ಲ.
2. ಯಾವುದೇ ಕಾಮಗಾರಿಗಳನ್ನು Spilt ಮಾಡಿ ಕೆ.ಆರ್.ಐ.ಡಿ.ಎಲ್.ಗೆ ವಹಿಸಬಾರದು.
3. ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು.
4. ಈ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು 2017-18ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿಗಧಿಪಡಿಸಿರುವ ಸ್ಟಂತ ಅನುದಾನದಿಂದ ಭರಿಸುವುದು.
5. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.
6. ಕಾಮಗಾರಿಗಳ ಅಂಶಗಳ ವಿಶಿಷ್ಟ ವಿವರಣೆಯು ಲೋಕೋಪಯೋಗಿ ಇಲಾಖೆಯ ದರಪಟ್ಟಿಯಲ್ಲಿ ಸೂಚಿಸಿರುವಂತೆ ಇರತಕ್ಕದ್ದು.
7. ಸದರಿ ಕಾಮಗಾರಿಗಳನ್ನು ಭಾಗಶ: ಅಥವಾ ಪೂರ್ಣವಾಗಿ ಇತರ ಯಾವುದೇ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿಲ್ಲ ಎಂದು ಧೃಢೀಕರಿಸತಕ್ಕದ್ದು.
8. ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳಲ್ಲಿ ಸೇರಿರುವುದಿಲ್ಲ ಎಂದು ಧೃಢೀಕರಿಸತಕ್ಕದ್ದು.
9. ಸದರಿ ಕಾಮಗಾರಿಗಳ ಅನುಷ್ಠಾನದಿಂದ ಇತರ ಯಾವುದೇ ಕಾಮಗಾರಿಯ ಅನುಷ್ಠಾನದಿಂದ ನಿರ್ವಹಣಾ ಅವಧಿ (Maintenance Period) ಅಥವಾ ದೋಷ ಬಾಧ್ಯತಾ ಅವಧಿ (Defects Liability Period) ಯನ್ನು ಉಲ್ಲಂಘಿಸಿಲ್ಲವೆಂದು ಖಾತ್ರಿ ಪಡಿಸಿಕೊಳ್ಳುವುದು.
10. ಸದರಿ ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ, ನಂತರದ ಹಾಗೂ ಮಧ್ಯದಲ್ಲಿಯೂ ಸಹ 3 ಹಂತದ ಭಾವಚಿತ್ರಗಳನ್ನು GPS Co-ordinate ಯೊಂದಿಗೆ ಮಾಡಿಕೊಂಡು ಭಾವಚಿತ್ರಗಳನ್ನು ಕಡತದಲ್ಲಿ ನಿರ್ವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಸಂಖ್ಯೆ: ಆಇ 308 ವೆಚ್ಚ-12/2018, ದಿನಾಂಕ: 19-03-2018 ರಂದು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಎನ್. ಪ್ರಭಾಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು, ವಿಧಾನಸೌಧ, ಬೆಂಗಳೂರು.

. . . 4 .

[redacted] | 10.

ಸಂಜಾಇ 344 ವೆಚ್ಚ-12/2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:06.04.2018

ಅಧಿಸೂಚನೆ

ರ್ಕಾರದ ಇಲಾಖೆಗಳು ಮತ್ತು ಇತರೆ ಸಂಗಡಣಾ ಸಂಸ್ಥೆಗಳು ಈ ಕೆಳಗಿನ ಕಾಮಗಾರಿಗಳನ್ನು ನೇರವಾಗಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್ - ಹಿಂದಿನ ಕೆಬಿಎಲ್‌ಎಸಿ) ಸಂಸ್ಥೆಯ ಮೂಲಕ ಗರಿಷ್ಠ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗಡಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪದತ್ತವಾದ ಅಧಿಕಾರ ಚಲಾಯಿಸಿ 2018-19 ನೇ ಸಾಲಿಗೆ ಈ ಕೆಳಕಂಡ ವಿನಾಯಿತಿಗೊಳಪಟ್ಟು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

(i) ಎಲ್ಲಾ ತರಹದ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ, ಲೇಬರ್ ನಿರ್ಮಾಣ, ಸಂಬಂಧಿಸಿದ ಎಲ್ಲಾ ಎಲೆಕ್ಟ್ರಿಕಲ್ ಕಾಮಗಾರಿಗಳ ನಿರ್ಮಾಣ, ರಸ್ತೆ ರೀತಿಗಳ ನಿರ್ವಹಣೆ.

(ii) ಮೂಲಭೂತ ಸೌಕರ್ಯದ ಕಾಮಗಾರಿಗಳು ಮತ್ತು ರಸ್ತೆ ನಿರ್ಮಾಣ ಹಾಗೂ ನಿರ್ವಹಣೆ.

(iii) ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿಗಳು.

ಷರತ್ತುಗಳು:

1) ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಮೇಲಿನ ಕಾಮಗಾರಿಗಳನ್ನು ತನ್ನದೇ ಆಂತರಿಕ ಸಂಪನ್ಮೂಲಗಳಿಂದ ಕಾರ್ಯಗತಗೊಳಿಸತಕ್ಕದ್ದು ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ, ಕೆ.ಟಿ.ಪಿ.ಪಿ ಕಾಯ್ದೆ ಮತ್ತು ಅಧಿನಿಯಮಗಳು, ಇ-ಸಂಗಡಣಾ ವೇದಿಕೆಯ ಮೂಲಕ ಕೈಗೊಳ್ಳಬೇಕು.

2) ಈ ಅಧಿಸೂಚನೆಯ ಅವಧಿಯು ಮುಕ್ತಾಯಗೊಳ್ಳುವುದರೊಳಗಾಗಿ, ಗುತ್ತಿಗೆ ಪಡೆಯಲ್ಪಟ್ಟಿರುವ KRIDL ಸಂಸ್ಥೆಯು ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯವೇ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು.

3) ಸರ್ಕಾರದ ಇಲಾಖೆಗಳು/ನಿಗಮಗಳು/ಮಂಡಳಿಗಳು ಯಾವುದೇ ಕಾಮಗಾರಿಗಳನ್ನು Split ಮಾಡಿ KRIDLಗೆ ವಹಿಸಬಾರದು.

4) ಉತ್ತಮ ಗುಣಮಟ್ಟದ ಕಾಮಗಾರಿ/ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಂಬಂಧಪಟ್ಟ ಇಲಾಖೆಗಳು ದೃಢಪಡಿಸಿಕೊಳ್ಳುವುದು.

07 APR 2018
136

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ಎನ್.ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗಡಣಾ ಕೋಶ)

ಎಂಡಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ಟಿ.ಕಾಲೇಜು ಅಂಚೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-59, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 10 ಮತ್ತು ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

ಪ್ರತಿ:

1) ಮಾನ್ಯ ಮಂತ್ರಿಗಳು (ಲೆಕ್ಕ ಮತ್ತು ಪರಿಶೋಧನೆ), ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾಮಾನ್ಯ ಮತ್ತು ಆಡಳಿತ ಇಲಾಖೆ
3) [illegible]
4) [illegible]

Scanned with CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಮುಅ(ಜಾ ಮತ್ತು ಪಿಪಿಇಡಿ/ಪಿ.ಆರ್/18/2012–13

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 19/01/2013

ಸುತ್ತೋಲೆ

ವಿಷಯ: ಪಾಲಿಕೆಯ ಎಲ್ಲಾ ಇಂಜಿನಿಯರಿಂಗ್ ವಿಭಾಗಗಳಲ್ಲಿ ಕಾಮಗಾರಿಗಳ ಅಂದಾಜುಪಟ್ಟಿ ತಯಾರಿಕೆ, ಟೆಂಡರ್ ಪ್ರಕ್ರಿಯೆಗಳಲ್ಲಿ ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಅನುಸರಿಸಬೇಕಾದ ವಿಧಿ–ವಿಧಾನಗಳ ಕುರಿತು.

* * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಲೆಕ್ಕ ಪರಿಶೋಧನೆಯನ್ನು ಭಾರತ ಲೆಕ್ಕ ನಿಯಂತ್ರಣ ಮತ್ತು ಮಹಾ ಲೆಕ್ಕಪರಿಶೋಧನಾ ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್–2012ಕ್ಕೆ ಕೊನೆಗೊಂಡಿರುವಂತೆ ವಿವರವಾದ ವರದಿಯನ್ನು ಸಲ್ಲಿಸಿರುತ್ತಾರೆ. ಈ ವರದಿಯಲ್ಲಿ ಪ್ರಮುಖವಾಗಿ ಈ ಕೆಳಕಂಡ ಅಂಶಗಳನ್ನು ಗಮನಿಸಿರುತ್ತಾರೆ.

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಮತ್ತು ಇನ್ನಿತರೇ ಕಾಮಗಾರಿಗಳನ್ನು ಸಮರ್ಪಕವಾಗಿ ಅಗತ್ಯತೆಯ ನಿರ್ಧಾರಣೆಯನ್ನು ಮಾಡದೇ ಅಥವಾ ರಸ್ತೆಗಳ ಇತಿಹಾಸ ಗಣನೆಗೆ ತೆಗೆದುಕೊಳ್ಳದೇ ಯೋಜನೆಗಳನ್ನು ಮಾಡಿದೆ. ಅಂದಾಜು ಮಾಡಲಾಗಿದ್ದ ಕಾಮಗಾರಿಗಳಿಗೂ ಮೀರಿ ಬಹಳಷ್ಟು ಸಂಖ್ಯೆಯ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವ ಕಾರಣ ಪಿ.ಓ.ಡಬ್ಲ್ಯೂ ಕಾಮಗಾರಿಗಳಿಗೆ ಯಾವುದೇ ಪಾವಿತ್ರ್ಯತೆಯನ್ನು ನೀಡಿಲ್ಲ ಎಂಬ ಅಂಶಗಳನ್ನು ಗಮನಿಸಲಾಗಿರುತ್ತದೆ.

ಆ) ಪಾಲಿಕೆಯು ಗುತ್ತಿಗೆದಾರರು/ಸರಬರಾಜುದಾರರು ಇಟ್ಟಿದ್ದ ಠೇವಣಿಗಳ ಮೇಲಿನ ಲೆಕ್ಕಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಹಾಗೂ ಹಲವಾರು ಬಾರಿ ಈ ಠೇವಣಿಗಳ ದುರ್ಬಳಕೆ ಆಗಿರುವುದಾಗಿಯೂ, ಹುಂಡಿ ಪದ್ಧತಿಯನ್ನು ನಿರ್ವಹಿಸುವಲ್ಲಿಯೂ ಸಹ ಹಲವಾರು ನ್ಯೂನ್ಯತೆಗಳು ಇದೆ ಎಂದು ವರದಿ ಮಾಡಲಾಗಿದೆ.

ಇ) ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಟೆಂಡರ್ ಪ್ರಕ್ರಿಯೆಯನ್ನು ನಿಯಮಗಳಿಗೆ ವಿರುದ್ಧವಾಗಿ ತಿರುಚಲಾಗಿದೆಯೆಂದು, ನಂತರ ಯಾವುದೇ ಕಾರಣಗಳನ್ನು ನೀಡದೇ ಅಂತಿಮ ಗಡುವನ್ನು ಮುಂದೂಡಲಾಗಿದೆ, ಅಂದಾಜು ಪಟ್ಟಿಯನ್ನು ವಾಸ್ತವಿಕ ಪ್ರಕ್ರಿಯೆಗಳಿಗೆ ತದ್ವಿರುದ್ಧವಾಗಿ ತಯಾರಿಸಲಾಗಿರುತ್ತದೆ. ಗುತ್ತಿಗೆದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಅನುಷ್ಠಾನಗೊಳಿಸಲಾಗಿದೆ, ಮುಂತಾದ ಬಗ್ಗೆ ವರದಿಯನ್ನು ಮಾಡಿರುತ್ತಾರೆ. ಈ ಕಾರಣಗಳಿಂದಾಗಿ ಅನುಮಾನಗಳಿಗೆ ಆಸ್ಪದ, ವ್ಯರ್ಥ, ಅಕ್ರಮ ಹಾಗೂ ತಪ್ಪಿಸಬಹುದಾಗಿದ್ದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದು ವರದಿ ಮಾಡಿದೆ.

ಭಾರತ ಲೆಕ್ಕ ನಿಯಂತ್ರಣ ಮತ್ತು ಮಹಾ ಲೆಕ್ಕಪರಿಶೋಧನಾ ಸ್ಥಳೀಯ ಸಂಸ್ಥೆಗಳ ವರದಿಯನ್ನು ಪರಿಶೀಲಿಸಿದಾಗ ಪಾಲಿಕೆಯು ಕಾಮಗಾರಿಗಳನ್ನು ಅನುಷ್ಠಾನ ಮಾಡುವಲ್ಲಿ ಆಗಿರುವ ಅಕ್ರಮಗಳು ಮತ್ತು ಅನಾವಶ್ಯಕವಾಗಿ ವೆಚ್ಚಗಳನ್ನು ಮಾಡಿ ಪಾಲಿಕೆಯ ಮೇಲಿನ ಅನಗತ್ಯವಾದ ಆರ್ಥಿಕ ಹೊರೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಈ ಕೆಳಕಂಡ ಸೂಚನೆಗಳನ್ನು ಪರಿಗಣಿಸಲು ಕೂಡಲೇ ಜಾರಿಗೆ ಬರುವಂತೆ ಸುತ್ತೋಲೆ ಹೊರಡಿಸಲಾಗಿದೆ.

1. ಕಾಮಗಾರಿಗಳ ಅನುಷ್ಠಾನ (ಅಂದಾಜು ತಯಾರಿಕೆ)

ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯುವ ಮೊದಲು ಒಂದು ಪೂರ್ವಭಾವಿಯಾದ ವರದಿ ಹಾಗೂ ಉದ್ದೇಶಿತ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಒಂದು ಸ್ಥೂಲ ಅಂದಾಜನ್ನು ವಿಭಾಗೀಯ ಅಭಿಯಂತರರು ತಯಾರಿಸಬೇಕು. ತದನಂತರ ಎಲ್ಲಾ ಭಾಗಗಳ ದರಗಳನ್ನು, ಪರಿಮಾಣಗಳ ದರ, ವೆಚ್ಚ, ನಕ್ಷೆಗಳು, ವಿಶಿಷ್ಟ ವಿವರಣೆ, ದರ ವಿಶ್ಲೇಷಣೆ, ಅಳತೆ ವಿವರಗಳನ್ನು ಒಳಗೊಂಡ ಅಂದಾಜು ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿಯನ್ನು ಪಡೆಯತಕ್ಕದ್ದು. ಪ್ರತಿಯೊಂದು ಕಾಮಗಾರಿಗಳಿಗೂ ಸವಿವರವಾದ ಅಂದಾಜನ್ನು ತಯಾರಿಸಬೇಕು. ಪ್ರಸ್ತಾವನೆಯು ರಚನಾತ್ಮಕವಾಗಿ, ಸಮರ್ಥವಾಗಿದೆ ಹಾಗೂ ತಯಾರಿಸಲಾಗಿರುವ ಅಂದಾಜು ಪಟ್ಟಿ ಮಿತವ್ಯಯತೆಯಿಂದ ಕೂಡಿದೆ ಎಂಬುದಾಗಿ ತಾಂತ್ರಿಕ ಮಂಜೂರಾತಿಯಿಂದ ಖಚಿತ ಪಡಿಸಿಕೊಳ್ಳತಕ್ಕದ್ದು.

2. ವಾರ್ಡ್ ಮಟ್ಟದ ಕಾಮಗಾರಿಗಳು.

ರಸ್ತೆ ಬದಿ ಚರಂಡಿಗಳು

1. ರಸ್ತೆ ಬದಿ ಚರಂಡಿಗಳಲ್ಲಿ ಹಾಲಿ ಇರುವ 'ಕಲ್ಲು ಚಪ್ಪಡಿ/ಕಲ್ಲು ಚರಂಡಿಗಳನ್ನು ತೆರವುಗೊಳಿಸಿಕೊಂಡು ಬದಲಿ ಆರ್.ಸಿ.ಸಿ. ಚರಂಡಿಗಳಾಗಿ ಪರಿವರ್ತಿಸುತ್ತಿರುವುದು ಗಮನಕ್ಕೆ ಬಂದಿದ್ದು, ಈ ರೀತಿಯ ಅನಾವಶ್ಯಕ ಮತ್ತು ಅವೈಜ್ಞಾನಿಕ ರೀತಿಯಲ್ಲಿ ಚರಂಡಿಗಳ ನಿರ್ಮಾಣವನ್ನು ಕೈಗೊಳ್ಳಬಾರದು. ಕೂಡಲೇ ಇವುಗಳನ್ನು ತಡೆಹಿಡಿಯುವುದು. ಒಂದು ವೇಳೆ ಅವಶ್ಯವಾಗಿ ಮಾರ್ಪಡಿಸಬೇಕಾದ ಸಂದರ್ಭಗಳಲ್ಲಿ ತಾಂತ್ರಿಕ ಸಮರ್ಥನೆಗಳನ್ನು ನೀಡಿ ಈ ಬಗ್ಗೆ ಸಂಬಂಧಿಸಿದ ಮುಖ್ಯ ಅಭಿಯಂತರರಿಂದ ಸ್ಪಷ್ಟ ಅಭಿಪ್ರಾಯ ಶಿಫಾರಸ್ಸಿನೊಂದಿಗೆ ಸಲ್ಲಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗಳನ್ನು ಪಡೆಯುವುದು ಕಡ್ಡಾಯ.
2. ಹೊಸದಾಗಿ Collector streets and local streetsಗಳಲ್ಲಿ ರಸ್ತೆ ಬದಿ ಚರಂಡಿಗಳನ್ನು ನಿರ್ಮಿಸಬೇಕಾದಲ್ಲಿ ಪ್ರೀಕ್ಯಾಸ್ಟ್ ಚರಂಡಿಗಳನ್ನು ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಇದಕ್ಕೆ ಬೇಕಾದಂತಹ ತಾಂತ್ರಿಕ ವಿಶ್ಲೇಷಣೆ/ವಿನ್ಯಾಸಗಳನ್ನು ಕೇಂದ್ರ ಕಛೇರಿಯಿಂದ ಪ್ರತ್ಯೇಕವಾಗಿ ನೀಡಲಾಗುವುದು.
3. ಯಾವುದೇ ಸಂದರ್ಭದಲ್ಲಿ Collector streets and local streetsಗಳಲ್ಲಿನ ರಸ್ತೆ ಬದಿ ಚರಂಡಿಗಳನ್ನು ಪಾಲಿಕೆ ವತಿಯಿಂದ ಮುಚ್ಚುವ ಕೆಲಸಗಳನ್ನು ತೆಗೆದುಕೊಳ್ಳತಕ್ಕದಲ್ಲ.
4. ರಸ್ತೆ ಬದಿ ಚರಂಡಿಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಅವಶ್ಯಕ ಅಗತ್ಯ ಇಳಿಜಾರು (ವಾಟ) (Gradient) ಪರಿಶೀಲಿಸಿ ಕೆಲಸದಲ್ಲಿ ಅಳವಡಿಸಿಕೊಳ್ಳುವುದು.

5. ರಸ್ತೆ ಚಂಡಿಗಳ ನಿರ್ಮಾಣಗಳನ್ನು ಒಳಹರಿವು ಪ್ರಮಾಣವನ್ನು (Hydraulic analysis) ಗಣನೆಗೆ ತೆಗೆದುಕೊಂಡು ನಿರ್ಮಿಸತಕ್ಕದ್ದು.
6. ರಸ್ತೆ ಬದಿಯ ಚರಂಡಿಗಳನ್ನು ನಿರ್ಮಿಸುವಾಗ ಈ ಹಿಂದೆ ಹೊರಡಿಸಿರುವ ಸುತ್ತೋಲೆಗಳಂತೆ (soaking pits, ನೀರು ಇಂಗು ಗುಂಡಿಗಳು, silt traps)ಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.
7. ತಗ್ಗು ಪ್ರದೇಶಗಳಲ್ಲಿ ರಸ್ತೆ ಹಾಗೂ ಚರಂಡಿಗಳನ್ನು ನಿರ್ಮಿಸುವಾಗ ಪ್ರದೇಶದ Bed Levels ಹಾಗೂ ಸರ್ವೆ ಮಾಡಿ ಚರಂಡಿ ವ್ಯವಸ್ಥೆಗಳನ್ನು ವಿನ್ಯಾಸಗೊಳಿಸಿ ಕಾರ್ಯಗತಗೊಳಿಸತಕ್ಕದ್ದು. ಇಂತಹ ಕಾಮಗಾರಿಯನ್ನು ಪ್ರಮುಖ ಆದ್ಯತೆ ಮೇರೆಗೆ ಕೈಗೊಂಡ ಪ್ರವಾಹ ಹಾನಿಗಳನ್ನು ತಡೆಗಟ್ಟುವುದು.

ಪಾದಚಾರಿ ಮಾರ್ಗಗಳು:

1. ಎಲ್ಲಾ ಪಾದಚಾರಿ ಮಾರ್ಗಗಳನ್ನು ಸುಸ್ಥಿತಿಯಲ್ಲಿಡುವುದು ಪ್ರಮುಖ ಆಧ್ಯತೆಯ ಕಾಮಗಾರಿಯಾಗಿರುತ್ತದೆ.
2. ಪಾದಚಾರಿ ಮಾರ್ಗಗಳಲ್ಲಿ ಹಾಲಿ ಇರುವ ಹಾಸಿನ ದಾರಿಯನ್ನು ತೆಗೆದು ಹೆಚ್ಚಿನ ವೆಚ್ಚದ ಸಾಮಾಗ್ರಿಗಳಾದ ಟೈಲ್ಸ್, ಕಾಂಕ್ರೀಟ್, ಆರ್.ಸಿ.ಸಿ.ಯನ್ನು ಬಳಸುತ್ತಿರುವುದು ಕಂಡು ಬಂದಿದ್ದು, ಈ ರೀತಿಯ ನಿರ್ವಹಣೆಯಿಂದ ಪಾಲಿಕೆಗೆ ಅನಗತ್ಯವಾಗಿ ಹೆಚ್ಚಿನ ಆರ್ಥಿಕ ನಷ್ಟವಾಗುವುದರೊಂದಿಗೆ ಎಲ್ಲಾ ಪಾದಚಾರಿ ಮಾರ್ಗಗಳ ಸಮರ್ಪಕ ನಿರ್ವಹಣೆ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಪಾದಚಾರಿ ಮಾರ್ಗಗಳ ನಿರ್ಮಾಣದಲ್ಲಿ ಕಡ್ಡಾಯವಾಗಿ Gravel footpath ಅಥವಾ ಅವಶ್ಯವಿದ್ದಲ್ಲಿ ಕಲ್ಲು ಚಪ್ಪಡಿಯ ಹಾಸಿನ ದಾರಿಯನ್ನು ನಿರ್ಮಿಸುವುದು. ಈ ಸಾಮಾಗ್ರಿಗಳಿಗಿಂತ ಹೆಚ್ಚಿನ ಬೆಲೆಯ ಸಾಮಾಗ್ರಿಗಳನ್ನು ಉಪಯೋಗಿಸುವ ಅವಶ್ಯಕತೆ ಇದ್ದಲ್ಲಿ ಸಂಬಂಧಿಸಿದ ಮುಖ್ಯ ಅಭಿಯಂತರರವರ ದೃಢೀಕರಣದೊಂದಿಗೆ ಆಯುಕ್ತರ ಅನುಮೋದನೆಗೆ ಸಲ್ಲಿಸುವುದು.
3. ಪಾದಚಾರಿ ಮಾರ್ಗಗಳಲ್ಲಿ ಕಡ್ಡಾಯವಾಗಿ Shoulder drain, ಕಾಂಕ್ರೀಟ್ ಪ್ರೀಕ್ಯಾಸ್ಟ್ ಕರ್ಬ್‌ಗಳನ್ನು ಅಳವಡಿಸಿಕೊಳ್ಳತಕ್ಕದ್ದು.
4. ಪಾದಚಾರಿ ಮಾರ್ಗಗಳ ನಿರ್ಮಾಣ ಸಮಯದಲ್ಲಿ ಬರುವ ಮರಗಳ ಸುತ್ತಾ ನೀರು ಇಂಗಲು Pond ಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳುವುದು.
5. Collector streets and local streets ಗಳಲ್ಲಿ ರಸ್ತೆ ಬದಿಯ ಚರಂಡಿಗಳನ್ನು ಮುಚ್ಚಿ (Drain Cover) ಪಾದಚಾರಿ ರಸ್ತೆಗಳಾಗಿ ಪರಿವರ್ತಿಸುವ ಅವಶ್ಯಕತೆ ಇರುವುದಿಲ್ಲ.

ರಸ್ತೆ ಕಾಮಗಾರಿಗಳು:

1. ಹೊಸ ವಲಯಗಳಲ್ಲಿ ರಸ್ತೆ ಕಾಮಗಾರಿಗಳನ್ನು ನಿರ್ವಹಿಸುವಾಗ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿದ ನಂತಶವೇ ಮೆಟಲಿಂಗ್ ರಸ್ತೆ ನಿರ್ಮಿಸುವುದು.
2. ಯಾವುದೇ ರಸ್ತೆಗೆ ಮೆಟಲಿಂಗ್ ಒದಗಿಸಿದ ಒಂದು ಋತುಮಾನದ ನಂತರ ಡಾಂಬರ್ ಒದಗಿಸಲು ಪ್ರಸ್ತಾವನೆ ಸಲ್ಲಿಸುವುದು (ಮೊದಲನೇ ವರ್ಷದಲ್ಲಿ ಮೆಟಲಿಂಗ್ ಒದಗಿಸಿದಲ್ಲಿ 2ನೇ ವರ್ಷದಲ್ಲಿ ಡಾಂಬರ್ ಒದಗಿಸಬಹುದು). ಅವಶ್ಯವಾಗಿ ಅದೇ ವರ್ಷದಲ್ಲಿ ಡಾಂಬರೀಕರಣ ಒದಗಿಸಬೇಕಾದಲ್ಲಿ ಅಗತ್ಯ ಅಂಶದ Sub-base/Base course ಗಳನ್ನು ಅಳವಡಿಸಿಕೊಂಡು ತಾಂತ್ರಿಕ ವಿಶ್ಲೇಷಣೆ ಅನುಮೋದಿಸಿಕೊಂಡು ನಿರ್ವಹಿಸುವುದು.
3. Collector streets and Local streets ಗಳಿಗೆ BM ಮತ್ತು BC ಗಳನ್ನು ಒದಗಿಸತಕ್ಕದಲ್ಲ. ಆದರೆ ಈ ರಸ್ತೆಗಳ ಹೆಚ್ಚಿನ ಸಂಚಾರ ದಟ್ಟಣೆ ಹಾಗೂ ಸಬ್ ಆರ್ಟಿರಿಯಲ್ ರಸ್ತೆಗಳಾಗಿದ್ದಲ್ಲಿ ಇದರ

ಅವಶ್ಯಕತೆಗಳ ಬಗ್ಗೆ BBD test ಹಾಗೂ ಇನ್ನಿತರೇ ತಾಂತ್ರಿಕ ಪರೀಕ್ಷೆಗಳನ್ನು ಕಡ್ಡಾಯವಾಗಿ ಕೈಗೊಂಡು BM, DBM & BC ಅಳವಡಿಸುವ ಬಗ್ಗೆ ಆಯುಕ್ತರ ಅನುಮೋದನೆ ಪಡೆಯತಕ್ಕದ್ದು.

4. ರಸ್ತೆ ನಿರ್ಮಾಣ ಸಮಯದಲ್ಲಿ ಅವಶ್ಯವಾದ Camber/Longitudinal gradient ಗಳನ್ನು ಗಮನದಲ್ಲಿರಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸತಕ್ಕದ್ದು.
5. ಆಯುಕ್ತರ ಸುತ್ತೋಲೆ ಸಂಖ್ಯೆ: ಬಿ12(1)ಪಿಆರ್/394/11-12 ದಿನಾಂಕ: 07-03-2012 ರಲ್ಲಿ ನೀಡಿರುವ ಮಾರ್ಗಸೂಚಿ ಅನ್ವಯ ವಿವಿಧ ಹಂತಗಳಲ್ಲಿ ನಿರ್ವಹಿಸಬೇಕಾದ ಕಾರ್ಯ/ಜವಾಬ್ದಾರಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.
6. ದಿನಾಂಕ: 24-07-2009 ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ: EIC/EC/PR/1236/09-10 ರಲ್ಲಿ ಸೂಚಿಸಿರುವಂತೆ, ರೂ. 10.00 ಲಕ್ಷಕ್ಕೂ ಮೀರಿರುವ ಅಂದಾಜು ಪಟ್ಟಿಗಳನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರು ಖುದ್ದಾಗಿ ಸ್ಥಳ ಪರಿವೀಕ್ಷಣೆ ಮಾಡಿ ದೃಢೀಕರಣ ಮಾಡಲು ಸೂಚಿಸಿದೆ.
7. 2008-09 ರಿಂದ 2010-11 ರವರೆಗೆ ನಡೆದ ಕಾಮಗಾರಿಗಳ ಬಗ್ಗೆ ಮಹಾಲೇಖಪಾಲರು ನೀಡಿರುವ ಆಡಿಟ್ ವರದಿಯನ್ನು ಪ್ರತಿಯೊಬ್ಬ ಮುಖ್ಯ ಅಭಿಯಂತರರು ವರದಿಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಾನುಸಾರ ಅನುಮೋದನೆಗಳನ್ನು ಪಡೆದು ಕೆಟಿಪಿಪಿ ಮತ್ತು Standard Tender Document ನ ನಿಯಮಗಳಂತೆ ಟೆಂಡರ್‌ಗಳನ್ನು ಪ್ರಕ್ರಿಯಿಸಿ ವಿಶಿಷ್ಟತೆ (Standard) ವಿಶಿಷ್ಟ ವಿವರಗಣೆಗಳನ್ವಯ (Specifications) ಉತ್ತಮ ಗುಣಮಟ್ಟದಲ್ಲಿ ಕಾಮಗಾರಿಗಳನ್ನು ನಿರ್ವಹಿಸುವುದು.
8. 2008-09 ರಿಂದ 2010-11 ರ ವರೆಗಿನ ಪಾಲಿಕೆಯ ಕಾಮಗಾರಿಗಳ ಬಗ್ಗೆ ಮಹಾ ಲೇಖಪಾಲರು ಈಗಾಗಲೇ ಕರಡು ಆಡಿಟ್ ವರದಿ ನೀಡಿರುವುದು ಸರಿಯಷ್ಟೆ. ಈ ವರದಿಯಲ್ಲಿ ಅಂದಾಜು ಪಟ್ಟಿ ಸಿದ್ದಪಡಿಸುವ ಕ್ರಮ. ಕಾಮಗಾರಿಗಳನ್ನು ನಿರ್ವಹಿಸುವ ಕ್ರಮ ಇವುಗಳ ಬಗ್ಗೆ ಹಲವಾರು ನ್ಯೂನ್ಯತೆಗಳನ್ನು ಹಾಗೂ ಆರ್ಥಿಕ ನಷ್ಟಗಳು ಉಂಟಾಗಿರುವುದನ್ನು ಉಲ್ಲೇಖಿಸಿದ್ದು, ಈ ಬಗ್ಗೆ ತಕ್ಷಣ ಗಮನ ಹರಿಸುವುದು.
9. ವಾರ್ಡ್ ಮಟ್ಟದ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಟೆಂಡರ್ ಪ್ರಕ್ರಿಯೆ ನಡೆಸುವ ನಿಟ್ಟಿನಲ್ಲಿ ಕೆಲವೇ ಕಾಮಗಾರಿಗಳನ್ನು ಪಟ್ಟಿ ಮಾಡಿ ಪದೇ ಪದೇ ಟೆಂಡರ್‌ಗಳನ್ನು ಕರೆಯುವ ವಾಡಿಕೆಯನ್ನು ಕೈಬಿಟ್ಟು ಎಲ್ಲಾ ಕಾಮಗಾರಿಗಳನ್ನು ಕ್ರೋಢೀಕರಿಸಿ ಕಾಮಗಾರಿಗಳನ್ನು ಪಟ್ಟಿಮಾಡಿ ಒಂದೇ ಬಾರಿ ಟೆಂಡರ್ ಪ್ರಕ್ರಿಯೆಯನ್ನು ನಡೆಸುವುದು.

ಈ ನಿಟ್ಟಿನಲ್ಲಿ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಖುದ್ದು ತಪಾಸಣೆ ನಡೆಸಿ ಪಟ್ಟಿಯನ್ನು ತಯಾರಿಸಿ ಈ ಪಟ್ಟಿಯಲ್ಲಿ ಪ್ರಸಕ್ತ ಸಾಲಿಗೆ ಅತಿ ಅಪೇಕ್ಷಿತವಾಗಿರುವ ಕಾಮಗಾರಿಗಳನ್ನು ಮಾತ್ರ ಪರಿಗಣಿಸಿ ಪ್ರಸಕ್ತ ಸಾಲಿಗೆ ಬಿಡುಗಡೆಯಾಗಿರುವ ಅನುದಾನದ ಪರಿಧಿಯೊಳಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಈ ಹಿನ್ನೆಲೆಯಲ್ಲಿ ಈ ವರದಿಯಲ್ಲಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಸಿದ್ದಪಡಿಸುವ ಅಂದಾಜುಪಟ್ಟಿಗಳ ಬಗ್ಗೆ ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆ ಕ್ರಮ ವಹಿಸಲು ಎಲ್ಲಾ ಸಂಬಂಧಪಟ್ಟ ಅಭಿಯಂತರರುಗಳಿಗೆ ಸೂಚಿಸಲಾಗಿರುತ್ತದೆ.

ಎಲ್ಲಾ ವಾರ್ಡ್ ಮಟ್ಟದ ಕಾಮಗಾರಿಗಳನ್ನು ಮಂಜೂರಾದ ಆರ್ಥಿಕ ವರ್ಷದಲ್ಲೇ ಗುತ್ತಿಗೆ ಪ್ರಕ್ರಿಯೆಗಳನ್ನು ಕೈಗೊಂಡು, ಕಾರ್ಯಾದೇಶ ನೀಡಿ ಆಯಾ ಆರ್ಥಿಕ ವರ್ಷದಲ್ಲೇ ಅನುಷ್ಠಾನಗೊಳಿಸಬೇಕು. ಕಾಮಗಾರಿಗಳನ್ನು ಆಯಾ ಆರ್ಥಿಕ ವರ್ಷದಲ್ಲಿ ಯಾವುದೇ ಕಾರಣದಿಂದಾಗಿ ಪ್ರಾರಂಭಿಸದಿದ್ದಲ್ಲಿ ಅಂತಹ

ಕಾಮಗಾರಿಗಳು ಆಯಾ ಆರ್ಥಿಕ ವರ್ಷದ ಮಾರ್ಚ್ 31 ಕ್ಕೆ ತಾನಾಗಿ ತಾನೇ ರದ್ದುಗೊಳ್ಳುವುದು ಹಾಗೂ ಜಾಬ್ ಸಂಖ್ಯೆ ತಾನಾಗಿ ತಾನೇ ಸ್ಥಗಿತಗೊಳ್ಳುವುದು.

3. ಕಾಮಗಾರಿಗಳಿಗೆ ಜಾಬ್ ಸಂಖ್ಯೆ

- ಆಯವ್ಯಯದಲ್ಲಿ ಒಳಗೊಂಡಿರುವ ಕಾಮಗಾರಿಗಳನ್ನು ಆಯಾ ಇಲಾಖಾ ಮುಖ್ಯಸ್ಥರು ಅಥವಾ ವಲಯ ಅಪರ/ಜಂಟಿ ಆಯುಕ್ತರು ಪರಿಶೀಲನೆ ಮಾಡಿ ಪಾಲಿಕೆಯ ಸಂಪನ್ಮೂಲಗಳ ಲಭ್ಯತೆಯನ್ನು ಗಮನದಲ್ಲಿ ಇಟ್ಟುಕೊಂಡು ಅವಶ್ಯಕವಾದ ಕಾಮಗಾರಿಗಳನ್ನು ಮಾತ್ರ ಆಯಾ ಆರ್ಥಿಕ ವರ್ಷದಲ್ಲಿ ಅನುಷ್ಠಾನಗೊಳಿಸುವುದು.
- ಆಯವ್ಯಯದಲ್ಲಿ ಸೇರಿಸಿದೆ ಎಂಬ ಮಾತ್ರಕ್ಕೆ ಅನಾವಶ್ಯಕ ಕಾಮಗಾರಿಗಳನ್ನು ಅನುಷ್ಟಾನಗೊಳಿಸಬೇಕು ಎಂಬ ಧೋರಣೆ ಸರಿಯಾದ ಕ್ರಮವಲ್ಲ.
- ಸರ್ಕಾರದಿಂದ ಆಯವ್ಯಯದ ಅನುಮೋದನೆ ಬಂದ ಆರು ತಿಂಗಳುಗಳ ಒಳಗೆ ಜಾಬ್ ಸಂಖ್ಯೆ ನೀಡುವ ಕಾರ್ಯವನ್ನು ಪೂರ್ಣಗೊಳಿಸಬೇಕು. ತದನಂತರ ಬಂದ ಪ್ರಸ್ತಾವನೆಗಳನ್ನು (ತುರ್ತು ಸಂದರ್ಭಗಳನ್ನು ಹೊರತುಪಡಿಸಿ) ಪರಿಗಣಿಸಬಾರದು.
- ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವ ಮುನ್ನ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಅನುಮೋದನೆ, ಕಾಮಗಾರಿಗಳ ಅವಶ್ಯಕತೆ ಬಗ್ಗೆ ಮುಖ್ಯ ಅಭಿಯಂತರರು ಸ್ಥಳ ಪರಿಶೀಲನೆ ಮಾಡಿರುವ ವರದಿ ಮತ್ತು ಆಯವ್ಯಯದಲ್ಲಿ ಅನುದಾನದ ಲಭ್ಯತೆ ಇರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.
- Lumpsum ಅನುಮತಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಬಳಕೆ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿ ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಅನುಮೋದನೆಯನ್ನು ಪಡೆದು ಅನುಷ್ಠಾನಗೊಳಿಸಬೇಕು.
- ಘನತ್ಯಾಜ್ಯ ನಿರ್ವಹಣೆಯ ಕಾಮಗಾರಿಗಳಿಗೆ ಪ್ರಥಮ ಆದ್ಯತೆ ನೀಡುವುದು.
- ಚಾಲ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಹಿಂದಿನ ಸಾಲುಗಳಲ್ಲಿ ಕೈಗೆತ್ತಿಕೊಂಡು ಮುಂದುವರೆಸುತ್ತಿರುವ ಕಾಮಗಾರಿಗಳ ಅನುಮೋದನೆಗಳನ್ನು ಗಮನದಲ್ಲಿರಿಸಿಕೊಂಡು ಮಿಳಂಬ ಮಾಡದೆ ಪೂರ್ಣಗೊಳಿಸಲು ಕ್ರಮಕೈಗೊಳ್ಳುವುದು.

4. ಟೆಂಡರ್ ಪ್ರಕ್ರಿಯೆ

- ಆಡಳಿತ್ಮಾಕ ಹಾಗೂ ತಾಂತ್ರಿಕ ಮಂಜೂರಾತಿ ಹಾಗೂ ಕರಡು ಟೆಂಡರ್ ಷೆಡ್ಯೂಲ್ (Draft Tender Schedule) ತಯಾರಿಸಿ, ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದ ನಂತರವೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಬೇಕು.
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ (KTPP) ಅಧಿನಿಯಮಗಳಲ್ಲಿ ಮತ್ತು Standard Tender Document ರಲ್ಲಿ ವಿವರಿಸಿರುವ ಅಂಶಗಳಿಗೆ ಅನುಗುಣವಾಗಿ ಟೆಂಡರ್ ಆಹ್ವಾನಿಸಬೇಕು.
- ರೂ.5.00 ಲಕ್ಷ ಮತ್ತು ಕಡಿಮೆ ಮೊತ್ತದ ಕಾಮಗಾರಿಗಳಿಗೆ ಸಂಗ್ರಹಣೆ ಮತ್ತು ಟೆಂಡರ್ ಪ್ರಸ್ತಾವನೆಯನ್ನು e-tender portal ಉಪಯೋಗಿಸಿ online ಮುಖಾಂತರವೇ ಟೆಂಡರ್ ಪ್ರಕ್ರಿಯೆಯನ್ನು ನಡೆಸುವುದು.

- e-tender ಗೆ ಸಂಬಂಧಪಟ್ಟ EMD ಪಾವತಿ, Requisition for Tender (ಟೆಂಡರ್‌ಗಾಗಿ ಬೇಡಿಕೆ) online ಮುಖಾಂತರವೇ ನಿರ್ವಹಣೆ ಮಾಡತಕ್ಕದ್ದು.
- ರೂ.5.00 ಲಕ್ಷಕ್ಕಿಂತ ಹೆಚ್ಚಿನ ಕಾಮಗಾರಿಗಳ ಸರಬರಾಜು ಮತ್ತು ಟೆಂಡರ್ ಬೇಡಿಕೆಗಳ ಪ್ರಕ್ರಿಯೆಗಳನ್ನು ಕಡ್ಡಾಯವಾಗಿ e-procurement portal ಮುಖಾಂತರವೇ ನಿರ್ವಹಿಸತಕ್ಕದ್ದು.
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (KTPP) ಅಧಿನಿಯಮದ ಅನ್ವಯ ಟೆಂಡರ್ ಆಹ್ವಾನಿಸುವ ಪ್ರಕಟಣೆಗಳಲ್ಲಿ ಕಾಮಗಾರಿಗಳ ವಿವರಣೆ, ಟೆಂಡರ್‌ಗಾಗಿ ಇಡಬೇಕಾದ ಅಂದಾಜು ವೆಚ್ಚ, ಪೂರ್ಣಗೊಳಿಸಬೇಕಾದ ಅಂತಿಮ ಗಡುವು, ಟೆಂಡರ್ ಸ್ವೀಕರಿಸುವ ಮತ್ತು ತೆಗೆಯುವ ಸಮಯ ಹಾಗೂ ದಿನಾಂಕ ಮತ್ತು ಸಂಬಂಧಿಸಿದ ಷರತ್ತುಗಳನ್ನು ಸಂಪೂರ್ಣವಾಗಿ ಒದಗಿಸುವುದು.
- ಅಂದಾಜು ಮೊತ್ತ ರೂ.50.00 ಲಕ್ಷಗಳಿಗಿಂತ ಕಡಿಮೆ ಇದ್ದಲ್ಲಿ District Tender Bulletin ರಲ್ಲಿ ಪ್ರಚುರ ಪಡಿಸಲಾಗುತ್ತದೆ. ಹಾಗೂ ರೂ.50.00 ಲಕ್ಷಕ್ಕಿಂತ ಮೇಲ್ಪಟ್ಟ ಅಂದಾಜು ಮೊತ್ತದ ಕಾಮಗಾರಿಗಳನ್ನು State Tender Bulletin ರಲ್ಲಿ ಪ್ರಚುರ ಪಡಿಸಲಾಗುತ್ತದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರವೇ ವೃತ್ತ ಪತ್ರಿಕೆಗಳಲ್ಲಿ ಟೆಂಡರ್ ಪ್ರಕಟಣೆಗಳನ್ನು ನೀಡತಕ್ಕದ್ದು.
- ಟೆಂಡರ್ ಪ್ರಕಟಣೆಗಳನ್ನು ವಿಸ್ತೃತ ಪ್ರಸಾರವಿರುವ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಚುರ ಪಡಿಸಬೇಕು.
- ಟೆಂಡರ್ ಪ್ರಕಟಣೆಗಳನ್ನು ವೃತ್ತ ಪತ್ರಿಕೆಗಳಲ್ಲಿ ಪ್ರಚುರ ಪಡಿಸಿದ ದಿನವೇ ಟೆಂಡರ್ documentಗಳನ್ನು e-tender/e-procurement portal ನಲ್ಲಿ ಕಡ್ಡಾಯವಾಗಿ upload ಮಾಡಬೇಕು.
- Tender ಸ್ವೀಕರಿಸುವ ಅಂತಿಮ ದಿನಾಂಕವನ್ನು ಮುಂದೂಡಬೇಕಾದ ಪ್ರಸಂಗ ಬಂದಲ್ಲಿ ಸಕಾರಣಗಳೊಡನೆ ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದ ನಂತರವೇ ಈ ದಿನಾಂಕವನ್ನು ಮುಂದೂಡಲು ಅವಕಾಶವಿರುತ್ತದೆ. ಈ ವಿವರಗಳನ್ನು ವೃತ್ತ ಪತ್ರಿಕೆಗಳಲ್ಲಿ ಕಡ್ಡಾಯವಾಗಿ ಪ್ರಚುರ ಪಡಿಸಬೇಕು. ಈ ರೀತಿ ಮುಂದೂಡಿದ ಪ್ರಕಟಣೆಯಲ್ಲಿ ಟೆಂಡರ್ ಸ್ವೀಕರಿಸುವ ಮತ್ತು ತೆಗೆಯುವ ಸಮಯ ಹಾಗೂ ದಿನಾಂಕವನ್ನು ತಪ್ಪದೆ ನಮೂದಿಸತಕ್ಕದ್ದು.
- Tender ಪ್ರಕಟಣೆಗಳನ್ನು ದಿನ ಪತ್ರಿಕೆಗಳಲ್ಲಿ ಒಂದು ಅಥವಾ ಎರಡು ಕಾಮಗಾರಿಗಳಿಗೆ ಸೀಮಿತಪಡಿಸಿ ಪ್ರಚುರಪಡಿಸುವ ಬದಲು ಮಿತವ್ಯಯವನ್ನು ಸಾಧಿಸುವ ದೃಷ್ಟಿಯಲ್ಲಿ ಒಂದು ವಲಯ/ವಿಭಾಗಕ್ಕೆ ಸೇರಿದ ಎಲ್ಲಾ ಕಾಮಗಾರಿಗಳನ್ನು ಒಟ್ಟುಗೂಡಿಸಿ ಕಾಮಗಾರಿಗಳ ವಿವರಗಳನ್ನು ನೀಡಿ ಪ್ರಚುರಪಡಿಸುವುದು ಉತ್ತಮವೆಂದು ಪರಿಗಣಿಸಿ, ಈ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.
- ಟೆಂಡರ್ ಸಿಂಧುತ್ವದ ಅವಧಿಯಲ್ಲಿಯೇ ಟೆಂಡರ್ ಪ್ರಕ್ರಿಯೆ ಮತ್ತು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಳ್ಳುವ ಕ್ರಮವನ್ನು ಸಂಬಂಧಪಟ್ಟ ಅಧಿಕಾರಿಗಳು ಪೂರ್ಣಗೊಳಿಸತಕ್ಕದ್ದು. ಈ ಅವಧಿ ವಿಸ್ತರಿಸುವ ಸನ್ನಿವೇಶ ಬಂದಲ್ಲಿ ಅರ್ಹ ಗುತ್ತಿಗೆದಾರರಿಂದ ಒಪ್ಪಿಗೆ ಪಡೆದ ತದನಂತರ ಈ ಅವಧಿ ವಿಸ್ತರಿಸಬೇಕು.
- ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ಅರ್ಹ ಕನಿಷ್ಠ ಗುತ್ತಿಗೆದಾರರಿಗೆ ಗುತ್ತಿಗೆ ವಹಿಸುವ ಸಂದರ್ಭಗಳಲ್ಲಿ ಅಂದರೆ ಗುತ್ತಿಗೆದಾರರೊಡನೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿಯೇ Standard Tender Document ರಲ್ಲಿನ ನಿಯಮಗಳಂತೆ ಟೆಂಡರ್ ಮೊತ್ತದ ಶೇ.5 ರಷ್ಟು ಮೊತ್ತವನ್ನು FSD ಗಾಗಿ ಕಡ್ಡಾಯವಾಗಿ ಗುತ್ತಿಗೆದಾರರಿಂದ ಪಡೆಯತಕ್ಕದ್ದು.

5. ಗುಣಮಟ್ಟದ ನಿಯಂತ್ರಣ

- ಕಾಮಗಾರಿಗಳ ಅನುಷ್ಠಾನದ ಸಮಯದಲ್ಲಿ ಕಾಮಗಾರಿಗಳಿಗೆ ಉಪಯೋಗಿಸುವ ಸಾಮಾಗ್ರಿ/ಮಿಶ್ರಣದ ಗುಣಮಟ್ಟದ ಬಗ್ಗೆ ಪಾಲಿಕೆಯಲ್ಲಿ empanel ಹೊಂದಿರುವ ಸಂಸ್ಥೆಗಳ ಪ್ರಯೋಗಾಲಯದ ಅಥವಾ ಪಾಲಿಕೆಯ ಗುಣ ನಿಯಂತ್ರಣ ವಿಭಾಗದಿಂದ ನಿಗಧಿತ ಸಂಖ್ಯೆಯ ಅಥವಾ MORT&H ರಲ್ಲಿ ನಿಗಧಿಪಡಿಸಿರುವ ಸಂಖ್ಯೆಗೆ ಅನುಗುಣವಾಗಿ ಪ್ರಯೋಗ ಫಲಿತಾಂಶಗಳನ್ನು ಪಡೆದು ಕಾಮಗಾರಿಗಳ ಕಡತದಲ್ಲಿ ನಿರ್ವಹಿಸುವುದು.
- ರೂ.1.00 ಕೋಟಿ ಅಂದಾಜು ಯೋಜನಾ ವೆಚ್ಚಕ್ಕೆ ಮೇಲ್ಪಟ್ಟ ಕಾಮಗಾರಿಗಳ ನಿರ್ವಹಣೆ ಕಾರ್ಯಕ್ಕೆ ಯೋಜನಾ ಸಮಾಲೋಚಕರು (PMC) ರವರನ್ನು ನೇಮಿಸಿಕೊಳ್ಳುವುದು ಅಪೇಕ್ಷಣೀಯವಾಗಿರುತ್ತದೆ.
- ವಿಶೇಷ ಸ್ವರೂಪದ ಕಾಮಗಾರಿಗಳ ಅನುಷ್ಠಾನ ಸಂದರ್ಭದಲ್ಲಿ (Nature of Work) ಕಾಮಗಾರಿಯ ವಿಶೇಷತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಮಾತ್ರ ಯೋಜನಾ ಸಮಾಲೋಚಕರನ್ನು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ನಿಯೋಜಿಸಿಕೊಳ್ಳುವುದು.

6. ಕಾಮಗಾರಿಗಳ ಬದಲಾವಣೆ/ಸ್ಥಳ ಬದಲಾವಣೆ

ಯಾವುದೇ ಸಂದರ್ಭದಲ್ಲಿ ಅನುಮೋದಿತ ಕಾಮಗಾರಿಗಳ ಬದಲು ಇನ್ನೊಂದು ಕಾಮಗಾರಿಯನ್ನು ತೆಗೆದುಕೊಂಡು ಅನುಮೋದಿತ ಕಾಮಗಾರಿಗಳಿಗೆ ಬದಲು ಅನುಷ್ಠಾನಗೊಳಿಸುವುದು ಸರಿ ಅಲ್ಲ. ಅನಿವಾರ್ಯ ಕಾರಣಗಳಿಂದ ಸ್ಥಳ ಬದಲಾವಣೆ ಪ್ರಸಂಗ ತಲೆದೋರಿದಲ್ಲಿ, ಅನುಮೋದಿತ ಕಾಮಗಾರಿಯ ಸ್ಥೂಲ ವಿವರಗಳು ಬದಲಾದ ಕಾಮಗಾರಿಗಳಿಗೆ ಹೊಂದಾಣಿಕೆ ಆದಲ್ಲಿ ಮಾತ್ರ BOQ ಗಳು ಸಹಜವಾಗಿಯೇ ಇದ್ದು, ಸರಿಸಮಾನವಾಗಿ ಇದ್ದಲ್ಲಿ ಮಾತ್ರ ವಿಶೇಷ ಸಂದರ್ಭದಲ್ಲಿ ಪರಿಗಣಿಸಬಹುದು. ಇಂತಹ ಬದಲಾವಣೆಯನ್ನು ಸಹ PWD code ನಿಯಮಗಳ ಅನ್ವಯ ಸಕ್ಷಮ ಪ್ರಾಧಿಕಾರದ ಪೂರ್ವ ಅನುಮತಿ ಪಡೆದ ನಂತರವೇ ಕೈಗೆತ್ತಿಕೊಳ್ಳಬಹುದು. ಯಾವುದೇ ಅನುಮೋದಿತ ಕಾಮಗಾರಿಯ ಸ್ವರೂಪವೇ (Scope of Work) ಬದಲಾಯಿಸಿ ನಿರ್ವಹಿಸಬೇಕಾದ ಸಂದರ್ಭದಲ್ಲಿ ಅಂದರೆ ಉದಾಹರಣೆಗೆ ಕಟ್ಟಡ ನಿರ್ಮಿಸಲು ಅಂದಾಜು ಪಟ್ಟಿಯನ್ನು ಅನುಮೋದಿಸಿಕೊಂಡು ಕಟ್ಟಡ ನಿರ್ಮಾಣ ಕಾಮಗಾರಿಯ ಬದಲಾಗಿ ಬೇರೆ ಸ್ವರೂಪದ ಕಾಮಗಾರಿಯನ್ನು ನಿರ್ವಹಿಸಬೇಕಾದ ಸಂದರ್ಭದಲ್ಲಿ ಈ ಹೊಸಲು ಅನುಮೋದನೆಯಾಗಿರುವ ಕಾಮಗಾರಿಯನ್ನು ಕಡ್ಡಾಯವಾಗಿ ರದ್ದುಪಡಿಸಿ ಹೊಸದಾಗಿ ಅಂದಾಜು ಪಟ್ಟಿಗಳನ್ನು ತಯಾರಿಸಿಕೊಂಡು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಟೆಂಡರ್ ಪ್ರಕ್ರಿಯೆ ನಡೆಸಿದ ನಂತರವೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

7. ಕಾಮಗಾರಿಗಳ ಅನುಷ್ಠಾನದ ಪೂರ್ವದಲ್ಲಿ **pre-audit** ನಡೆಸುವ ಬಗ್ಗೆ.

- ಕಾಮಗಾರಿಗಳ ಗುಣಮಟ್ಟ ಕಾಪಾಡುವ ಮತ್ತು ಅನುಷ್ಠಾನದ ಹಂತದಲ್ಲಿ ಎದುರಿಸಬಹುದಾದ ತೊಂದರೆಗಳನ್ನು ನಿಭಾಯಿಸುವ ನಿಟ್ಟಿನಲ್ಲಿ ಎಲ್ಲಾ ಕಾಮಗಾರಿಗಳನ್ನು ಸ್ಥೂಲ ಪರಿಶೀಲನೆ ಮಾಡಿ ಅಗತ್ಯಕ್ಕೆ ಅನುಗುಣವಾಗಿ ಮತ್ತು ಆ ಸ್ಥಳಕ್ಕೆ ವಾಸ್ತವಿಕವಾಗಿ ಸರಿ ಹೊಂದುವಂತೆ ಅಂದಾಜು ಪಟ್ಟಿಗಳನ್ನು pre-audit ಮಾಡುವ ಕಾರ್ಯವನ್ನು ಎಲ್ಲಾ ವಿಭಾಗಗಳ ಹಂತದಲ್ಲಿಯೂ ತೆಗೆದುಕೊಳ್ಳಬೇಕಾಗಿರುತ್ತದೆ.

- ಈ pre-audit ಕೈಗೊಳ್ಳುವ ಸಲುವಾಗಿ ಪ್ರತ್ಯೇಕ ತಂಡಗಳನ್ನು ರಚಿಸಲಾಗುವುದು.

8. ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾಮಗಾರಿಗಳನ್ನು ವಹಿಸಿ ನಿರ್ವಹಿಸುವ ಕುರಿತು.

- ಪಾಲಿಕೆ ವ್ಯಾಪ್ತಿಯಲ್ಲಿ ಕೆಲವು ತುರ್ತು ಸಂದರ್ಭಗಳಲ್ಲಿ ಅನುಷ್ಠಾನಗೊಳಿಸಬೇಕಾಗಿರುವ ಕಾಮಗಾರಿಗಳನ್ನು ಮಾತ್ರ ಮೆ॥ಕೆ.ಆರ್.ಐ.ಡಿ.ಎಲ್ (KRIDL) ಸಂಸ್ಥೆಗೆ ವಹಿಸಿಕೊಡಲು ಅವಕಾಶವಿರುತ್ತದೆ. ಆದರೆ, ಬಹಳಷ್ಟು ಸಂದರ್ಭಗಳಲ್ಲಿ ಸಮರ್ಥನೀಯವಲ್ಲದ ಕಾರಣಗಳನ್ನು ನೀಡಿ ಮೆ॥ಕೆ.ಆರ್.ಐ.ಡಿ.ಎಲ್ (KRIDL) ಸಂಸ್ಥೆಗೆ ಕಾಮಗಾರಿಗಳನ್ನು ವಹಿಸಿಕೊಡಲು ಪ್ರಸ್ತಾವನೆಯನ್ನು ಸ್ವೀಕರಿಸಲಾಗುತ್ತಾ ಇದ್ದು, ಇಂತಹ ಪ್ರವೃತ್ತಿ ಕೂಡಲೇ ನಿಲ್ಲಿಸುವುದು ಸೂಕ್ತವಾಗಿರುತ್ತದೆ.
- ಸರ್ಕಾರದ ಆದೇಶದಲ್ಲಿ ಅವಕಾಶ ಮಾಡಿಕೊಟ್ಟಿರುವಂತಹ ಕುಡಿಯುವ ನೀರಿನ ಸರಬರಾಜು, ಶಾಲಾ ಕೊಠಡಿ ನಿರ್ಮಾಣ, ಅಂಗನವಾಡಿ ಕೇಂದ್ರಗಳ ನಿರ್ಮಾಣ ಮತ್ತು ಪ್ರಕೃತಿ ವಿಕೋಪಗಳ ಸಂದರ್ಭಗಳಲ್ಲಿ ಮಾತ್ರ ಕಾಮಗಾರಿಗಳ ಅನುಷ್ಠಾನವನ್ನು ಮೆ॥ ಕೆ.ಆರ್.ಐ.ಡಿ.ಎಲ್(KRIDL) ಸಂಸ್ಥೆಗೆ ವಹಿಸಿ ಕೊಡಲು ಕ್ರಮ ಕೈಗೊಳ್ಳುವುದು. ಇನ್ನಿತರೇ ಎಲ್ಲಾ ಸಂದರ್ಭಗಳಲಿ ಸಹ ಕೆ.ಟಿ.ಪಿ.ಪಿ ಕಾಯ್ದೆ ಅನುಗುಣವಾಗಿ ಟೆಂಡರ್ ಪ್ರಕ್ರಿಯೆ ನಡೆಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

9. ಡಾಂಬರೀಕರಣಕ್ಕೆ ಸಂಬಂಧಪಟ್ಟ ಕಾಮಗಾರಿಗಳು

- ಅನುಮತಿಯಾನದ ಆಧಾರಿತ ಕಾಮಗಾರಿಗಳಾಗಿದ್ದು, ಈ ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕೆ ಮೊದಲು ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಕೊಂಡು ಅನುಷ್ಠಾನವನ್ನು ಮಾತ್ರ ಮಳೆಗಾಲವನ್ನು ಹೊರತುಪಡಿಸಿದ ಸಮಯದಲ್ಲಿ ಮಾತ್ರ ಕೈಗೆತ್ತಿಕೊಳ್ಳುವುದು. ಇಲ್ಲದೇ ಇದ್ದಲ್ಲಿ ಮಳೆಗಾಲದಲ್ಲಿ ಡಾಂಬರು ಕಾಮಗಾರಿಗಳನ್ನು ಕೈಗೊಂಡಲ್ಲಿ ರಸ್ತೆಗಳು ಹಾಳಾಗಿ ಪಾಲಿಕೆಗೆ ಆರ್ಥಿಕ ನಷ್ಟವನ್ನು ಉಂಟು ಮಾಡುವ ಸಂದರ್ಭಗಳು ಒದಗಿಬರುತ್ತದೆ.
- ಎಲ್ಲಾ ಕಾಮಗಾರಿಗಳನ್ನು ಕಾರ್ಯಾದೇಶಗಳಲ್ಲಿ ನಿಗಧಿಪಡಿಸುವ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. ನಿಗಧಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದ ಕೆಲವು ಸಂದರ್ಭಗಳಲ್ಲಿ ಸಕಾರಣಗಳೊಂದಿಗೆ ಸಕ್ಷಮ ಪ್ರಾಧಿಕಾರದಿಂದ ಕಾಲಾವಧಿ ವಿಸ್ತರಣೆಗೆ ಅನುಮತಿ ಪಡೆದುಕೊಳ್ಳುವುದು.
- ಡಾಂಬರು ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸುವ ವೇಳೆಯಲ್ಲಿ ಪಾಲಿಕೆಗೆ ಅನ್ವಯವಾಗುವ ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ ಚಾಲ್ತಿ ದರಪಟ್ಟಿಯಲ್ಲಿನ (KPWD-SR) ವಿಶಿಷ್ಟ ವಿವರಣೆಗಳನ್ನು ಹಾಗೂ ದರಗಳನ್ನು ಮಾತ್ರ ಪರಿಗಣಿಸತಕ್ಕದ್ದು. ಬೆಂಗಳೂರು ವೃತದ ದರಪಟ್ಟಿಯಲ್ಲಿ ಲಭ್ಯವಿರದ ವಿಶಿಷ್ಟ ವಿವರಣೆಗಳನ್ನು ಅಂದಾಜುಪಟ್ಟಿಗಳಲ್ಲಿ ಅಳವಡಿಸಿಕೊಳ್ಳಬೇಕಾದ ಸಂದರ್ಭಗಳಲ್ಲಿ ಸಕ್ಷಮ ಪ್ರಾದೀಕಾರದ ಅನುಮೋದನೆ ಪಡೆದ ನಂತರವೇ ಕಡ್ಡಾಯವಾಗಿ ಕ್ರಮ ಕೈಗೊಳ್ಳುವುದು.

10. ಬಿಲ್ಲುಗಳ ಪಾವತಿ

- ಕಾಮಗಾರಿಗಳ ಅಥವಾ ಸರಬರಾಜು ಬಿಲ್ಲುಗಳ ಪಾವತಿಯನ್ನು ಮಾಡುವ ಮುನ್ನ ಪೂರ್ವ ಲೆಕ್ಕಪರಿಶೋಧನೆಯನ್ನು ಆಯಾ ವಲಯದ ಸಹಾಯಕ ಹಣಕಾಸು ನಿಯಂತ್ರಣ ಅಧಿಕಾರಿಗಳ ಉಸ್ತುವಾರಿ ಮತ್ತು ಕೇಂದ್ರ ಕಛೇರಿ ಮಟ್ಟದಲ್ಲಿ ಮುಖ್ಯ ಲೆಕ್ಕಾಧಿಕಾರಿಗಳು ರವರ ನಿರ್ವಹಣೆಯಲ್ಲಿ ಪೂರ್ವ ಲೆಕ್ಕಪರಿಶೋಧನೆಯನ್ನು ನಡೆಸಿದ ನಂತರವೇ ಬಿಲ್ಲುಗಳ ಪಾವತಿಯನ್ನು ಮಾಡತಕ್ಕದ್ದು.
- ಈ ನಿಟ್ಟಿನಲ್ಲಿ ಪೂರ್ವ ಲೆಕ್ಕಪರಿಶೋಧಕರ ತಂಡವನ್ನು ರಚಿಸಿ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಂಬಂಧಪಟ್ಟ ಎಲ್ಲಾ ಅನುಷ್ಠಾನ ಅಧಿಕಾರಿಗಳು ಮತ್ತು ಇಲಾಖಾ ಮುಖ್ಯಸ್ಥರು ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ನಿಟ್ಟಿಯಲ್ಲಿ ಯಾವುದೇ ರೀತಿಯ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ ವಿರುದ್ಧ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸುವುದರ ಜೊತೆಗೆ ಅಕ್ರಮಗಳಿಗೆ ಕಾರಣರಾದ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ ಮೇಲೆ ನಷ್ಟದ ಹೊಣೆಗಾರಿಕೆಯನ್ನು ನಿಗಧಿಪಡಿಸಿ ಅವರಿಂದ ಪಾಲಿಕೆಗೆ ಆಗಿರುವ ನಷ್ಟವನ್ನು ಸಹ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು.

14.1.2013

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು :

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3. ವಿಶೇಷ ಆಯ್ಯುಕ್ತರು (ಯೋಜನೆ)/ಅಪರ ಅಯುಕ್ತರು (ಯೋಜನೆ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಅಪರ ಆಯುಕ್ತರು (ಆಡಳಿತ)/ಅಪರ ಆಯುಕ್ತರು (ಕಲ್ಯಾಣ)/ ಅಪರ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ)ರವರಿಗೆ ಕಳುಹಿಸಿದೆ.
5. ಪ್ರಧಾನ ಅಭಿಯಂತರರರು/ಎಲ್ಲಾ ಮುಖ್ಯ ಅಭಿಯಂತರರು (ಕೇಂದ್ರ ಮತ್ತು ವಲಯ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ರವರಿಗೆ ಕಳುಹಿಸಿದೆ.
7. ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಮುಖ್ಯ ಅಭಿಯಂತರರು(ಎಸ್.ಡಬ್ಲ್ಯೂ.ಎಂ/ಎಸ್. ಡಬ್ಲ್ಯೂ.ಡಿ/ರಸ್ತೆ ಮೂಲಭೂತ ಸೌಕರ್ಯ/ಮಾರುಕಟ್ಟೆ/ ಬಿ.ಎಸ್.ಯು.ಪಿ/ ಓ.ಎಫ್.ಸಿ. ರವರಿಗೆ ಕಳುಹಿಸಿದೆ.
9. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ, ಎಲ್ಲ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
10. ಮುಖ್ಯ ಆರ್ಥಿಕ ಅಧಿಕಾರಿ/ಮುಖ್ಯ ಲೆಕ್ಕಾಧಿಕಾರಿ/ಮುಖ್ಯ ಲೆಕ್ಕ ಪರಿಶೋಧಕರು/ ಎಲ್ಲಾ ವಲಯ ಸಹಾಯಕ ಹಣಕಾಸು ನಿಯಂತ್ರಕರಿಗೆ ಕಳುಹಿಸಿದೆ.
11. ಸಾರ್ವಜನಿಕ ಸಂಪರ್ಕಾಧಿಕಾರಿ ರವರಿಗೆ ಕಳುಹಿಸಿದೆ.
12. ಕಛೇರಿ ಪ್ರತಿ.